"ಇಲ್ಲ ಬಿಡಯ್ಯಾ... ಈ ತಂತಿ ತುಂಡನ್ನು ನೀನು ಲಪಟಾಯಿಸಿರುವ ಪಾಕೆಟ್ ಬುಕ್ ಅಂತ ಭಾವಿಸಿ ಬಿಡುವಷ್ಟು ಮೂರ್ಖ ಮನುಷ್ಯ ನಾನಲ್ಲ. ಜತೆಗೆ ಸಾಕ್ಷಿ ಹೇಳುತ್ತಾ ಇರುವ ಆ ಮಿಲಾಂಡಾನ್ ಬಹಳ ವಿಶ್ವಾಸಾರ್ಹ ವ್ಯಕ್ತಿ. ಅಷ್ಟೇ ಅಲ್ಲಯ್ಯಾ... ಆ ಪಾಕೆಟ್ ಬುಕ್ಕನ್ನು ಕೈಗೆ ತಗೊಂಡ ಮೇಲೂ ನೀನು ಸಾಕಷ್ಟು ಹೊತ್ತು ಅಲ್ಲೇ ನಿಂತು, ಇನ್ನೂ ಒಂದಷ್ಟು ಹಣ ಏನಾದ್ರೂ ಅಲ್ಲಿ ಬಿದ್ದಿರಬಹುದಾ ಅಂತ ಹುಡುಕ್ತಾ ಇದ್ಯಂತಲ್ಲ?''

ಮರವಟ್ಟು ಹೋದ ಆ ಮುದುಕ ರೈತ. ಬಹಳ ಹೊತ್ತು ಅವನಿಗೆ ಮಾತೇ ಹೊರಡಲಿಲ್ಲ. ಕಡೆಗೆ ಭಾವೋದ್ರೇಕದ ಗಂಟಲಿನಲ್ಲಿಯೇ ಹತಾಶೆಯಿಂದ ತಡವರಿಸಿದ...

"ಏನು ಸ್ವಾಮಿ... ಏನಿದು ಅನ್ಯಾಯ?... ಸುಳ್ಳು ಆರೋಪಗಳು? ಹೀಗೆ ಒಬ್ಬ ಪ್ರಾಮಾಣಿಕ ಮನುಷ್ಯನ ಮರ್ಯಾದೆಯನ್ನು ಯಾರು ತಾನೇ ತೆಗಿತಾರೆ? ನಿಮಗೆ ಇದು ಸರಿಯೇ? ಇದು ನ್ಯಾಯವೇ ಧರ್ಮವೇ?... ಹೇಳಿ ಸ್ವಾಮಿ.''

ಅಷ್ಟರಲ್ಲೇ ಅವನ ಕೊರಳು ಕಟ್ಟಿ ಬಿಟ್ಟಿತು. ಕಡೆ ಕಡೆಯ ಮಾತುಗಳು ಕುಸಿದು ಹೋದವು.

ಆದರೆ, ಅವನ ಯಾವುದೇ ಪ್ರತಿರೋಧಗಳಿಗೆ ಬೆಲೆ ಇರಲಿಲ್ಲ. ಯಾರೊಬ್ಬರೂ ಅವನನ್ನು ನಂಬಲಿಲ್ಲ. ಆಗಲೇ ಅಲ್ಲಿಗೆ ಬಂದ ಮಿಲಾಂಡಾನ್ ಸಹ ಹುರುಪಿನಿಂದ ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿದ. ಹಾಶ್‌ಕಾಮ್‌ನೇ ಕಳ್ಳನೆಂದೂ ತಾನು ಪ್ರತ್ಯಕ್ಷವಾಗಿ ನೋಡಿದ್ದೇನೆ ಎಂದೂ ಘಂಟಾಘೋಷವಾಗಿ ವಾದಿಸಿದ. ಇವೆಲ್ಲದರಿಂದ ಬಡ ರೈತ ಮತ್ತಷ್ಟು ಕನಲಿ ಹೋದ. ತನ್ನ ವಿರೋಧಿಯನ್ನು ಬಾಯಿಗೆ ಬಂದ ಹಾಗೆಲ್ಲಾ ಬೈದ. ಅವನೇನು ಸುಮ್ಮನಿರುವ ಪೈಕಿಯೇ? ತಾನು ಕೂಡ ತನ್ನ ಹಳೆಯ ಶತ್ರುವನ್ನು ಕಠೋರವಾಗಿ ನಿಂದಿಸಿದ... ಬಗೆಬಗೆಯ ಶಬ್ದಕೋಶಗಳನ್ನು ಬಳಸಿದ. ಹಾಗಾಗಿ ಪರಸ್ಪರ ಕಾದಾಟ ಬೈದಾಟಗಳು ಸಾಕಷ್ಟು ಹೊತ್ತು ನಡೆದುಹೋದವು.

ಕಡೆಗೆ ಹಾಶ್‌ಕಾಮ್ ಆಗ್ರಹಿಸಿದಂತೆ ಅವನನ್ನು ಆಮೂಲಾಗ್ರವಾಗಿ ಶೋಧಿಸಲಾಯಿತು. ಆದರೆ, ಕಳುವಾದ ವಸ್ತು ಎಲ್ಲಿಯೂ ಕಾಣ ಸಿಗಲಿಲ್ಲ. ವಿಧಿ ಇಲ್ಲದೆ ಮೇಯರ್ ಅವನನ್ನು ಬಿಡುಗಡೆ ಮಾಡಲೇಬೇಕಾಯಿತು.

"ಇಷ್ಟಕ್ಕೆ ಸಂತೋಷ ಪಡಬೇಡ. ಈ ವಿಷಯವನ್ನು ನಾನು ಇಲ್ಲಿಗೆ ಬಿಡುವವನಲ್ಲ. ಪಬ್ಲಿಕ್ ಪ್ರಾಸಿಕ್ಯೂಟರ್‌ನನ್ನು ಸಂಪರ್ಕಿಸಿ ನಿನ್ನ ಮೇಲೆ ಕ್ರಮ ಕೈಗೊಳ್ಳುವುದು ಖಂಡಿತ... ಎಚ್ಚರಿಕೆ!''

ವ್ಯಗ್ರನಾಗಿ ಗದರಿ ಕಳಿಸಿದ ಮೇಯರ್.



ಈ ಎಲ್ಲ ಸುದ್ದಿ ಸಾಕಷ್ಟು ಬಣ್ಣ ಬಳಿದುಕೊಂಡು ಮಿಂಚಿನಂತೆ ಊರತುಂಬ ಹರಡಿತು. ಮೇಯರ್ ಆಫೀಸಿನಿಂದ ಹಾಶ್‌ಕಾಮ್ ಹೊರಬರುತ್ತಿದ್ದಂತೆ ಕೆಲವು ಕುಚೋದ್ಯಗಾರರು ಅವನನ್ನು ನೊಣಗಳಂತೆ ಮುತ್ತಿಕೊಂಡರು. ಬಗೆಬಗೆಯ ಗೇಲಿ ಮಾತುಗಳಿಂದ ಗೋಳುಹೊಯ್ದುಕೊಂಡರು. ಆ ವೃದ್ಧನಾದರೋ ಒಂದಿಷ್ಟು ವಿಚಲಿತನಾಗದೆ ಪರಮ ಶ್ರದ್ಧೆಯಿಂದ ತಂತಿ ತುಂಡಿನ ಕತೆಯನ್ನು ಸಾದ್ಯಂತವಾಗಿ ಬಿತ್ತರಿಸಿದ. ಅದನ್ನು ಕೇಳಿ ಅವರೆಲ್ಲರೂ ಮತ್ತಷ್ಟು ಅಪಹಾಸ್ಯ ಮಾಡಿದರು. ಬೇಕಾದಷ್ಟು ನಕ್ಕರು.

ಆ ಬಡಪಾಯಿ ಇನ್ನೆಲ್ಲಿಯೂ ನಿಲ್ಲದೆ ಹೊರಟುಬಿಟ್ಟ. ಸಲ್ಲದ ಈ ತೇಜೋವಧೆಗಳಿಂದಾಗಿ ಅವನ ಮನಸ್ಸು ಕುದಿಯುತ್ತಿತ್ತು. ಹೇಗಾದರೂ ಮಾಡಿ ಎಲ್ಲರನ್ನೂ ತಾನು ನಂಬಿಸಲೇಬೇಕೆಂಬ ಪ್ರಯತ್ನವನ್ನು ಅವನು ಬಿಡಲಿಲ್ಲ. ಆತ್ಮೀಯರು ಅನಿಸಿಕೊಂಡವರನ್ನೆಲ್ಲ ಕೂಗಿ ಕೂಗಿ ನಿಲ್ಲಿಸುವ... ಮತ್ತೆಮತ್ತೆ ತನ್ನ ಪ್ರಾಮಾಣಿಕತೆಯನ್ನು ನಿರೂಪಿಸಲೆತ್ನಿಸುವ! ಅಕಳಂಕವಾಗಿ ತನ್ನೆಲ್ಲ ಜೇಬುಗಳನ್ನು ಎಳೆದೆಳೆದು ತೋರಿಸುತ್ತಾ, "ನೋಡಿ ನೋಡಿ ಮಿತ್ರರೇ... ನೋಡಿ! ಇಲ್ಲೇನಾದರೂ ಆ ಪಾಕೆಟ್ ಬುಕ್ ಆಗಲೀ...